(ಅಧ್ಯಕ್ಷರು)

Remission ofpunishment to the persons sentenced by the House on 19th Septembe 1973.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಎರಡು ಮೂರು ದಿವಸಗಳ ಹಿಂದೆ ವಿದ್ಯಾರ್ಥಿಗಳ ಮುಷ್ಕರದ ಕೆಲವು ವಿದ್ಯಾರ್ಥಿಗಳಿಗೆ ಏನು ಶಿಕ್ಷೆಯನ್ನು ಕೊಟ್ಟಿದ್ದೀರೋ ಅದನ್ನು ರದ್ದು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅವರು ವಿದ್ಯಾರ್ಥಿಗಳೆಂಬುದನ್ನು ಸರ್ಕಾರ ಮನಗಾಣಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ವಿದ್ಯಾರ್ಥಿಗಳು ವಿದ್ಯಾರ್ಥಿಗಳಾಗಿ ಇರಬೇಕು.

ಶ್ರೀ ವಾಟಾಳ್ ನಾಗರಜ್.—ಅವರು ವಿದ್ಯಾರ್ಥಿಗಳಾಗಿಯೇ ಇದ್ದಾರೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಏನಾದರೂ ಕ್ರೀ ಹೋಂ ಡಿಪಾರ್ಟ್‌ಮೆಂಟಿನ ಪೋರ್ಟ್‌ಫೋಲಿಯೋವನ್ನು ಮಾನ್ಯ ಶ್ರೀ ಚನ್ನಬಸಪ್ಪನವರಿಗೆ ಕೊಟ್ಟರೆ, ನಿಜವಾಗಿಯೂ ತುಂಬಾ ದೇಶದಲ್ಲಿ ಇಂತಹ ಮುಷ್ಕರಗಳು ಇನ್ನೂ ಹೆಚ್ಚಾಗುತ್ತವೆ ಗಲಭೆಗಳೂ ಸಹ ಜಾಸ್ತಿಯಾಗುತ್ತವೆ. ಅವರಿಗೆ ಆದನ್ನು ಕೊಡುವುದು ಬೇಡ. ಏಕೆಂದರೆ ಅವರೇ ಮಾನ್ಯ ವಂಶ್ಯಗಳಿಗೆ ಹಿಂದೆ ಅಂತಹ ವಿದ್ಯಾರ್ಥಿಗಳನ್ನು ಕಂಡರೆ ಬಲಿ ಹಾಕಬೇಕೆಂದು ಹೇಳಿದ್ದು.

ಶ್ರೀ ಡಿ. ದೇವರಾಜ್ ಅರಸ್.—ನನ್ನ ಹತ್ತಿರ ಆ ಪೋರ್ಟ್‌ಫೋಲಿಯೊ ಇರುವುದು ಬೇಡ ಎಂದು ಹಿಂಜೆ ಇಲ್ಲಿಯೇ ಹೇಳಿರುವುದೂ ಇದೆ. ಬೇರೆಯವರಿಗೆ ಯಾರಿಗಾದರೂ ಇದನ್ನು ವರ್ಗಮಾಡಿ ಎಂದು ಹೇಳಿದ್ದು ನನಗೆ ಗೊತ್ತಿದೆ.

Satyagraha by theryots of Sandur.

ಶ್ರೀ ಕೋಣಂದೂರು ಲಿಂಗಪ್ಪ,—ನಮ್ಮ ರಾಜ್ಯದ ರೈತರು ಸಂಡೂರಿನಲ್ಲಿ ಸತ್ಯಾಗ್ರಹ ಹೋರಾಟ ಮಾಡುತ್ತಿದ್ದಾರೆ. ಅಲ್ಲಿರತಕ್ಕಂತಹ ಕುಮಾರಸ್ವಾಮಿ ದೇವಸ್ಥಾನದ ಹೆಸರಿನಲ್ಲಿ ಅಲ್ಲಿಯ ಮಾಜಿ ರಾಜರು ಸುಮಾರು ೩೬ ಸಾವಿರ ರೂಪಾಯಿ ಪ್ರತೀ ವರ್ಷ ಸರ್ಕಾರದಿಂದ ತೆಗೆದುಕೊಳ್ಳುತ್ತಿದ್ದಾರೆ.

ಅಧ್ಯಕ್ಷರು.—ಈಗ ಕಂದಾಯಮಂತ್ರಿಯವರು ಇಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಇದು ಸರ್ಕಾರದ ಎಲ್ಲಾ ಸಚಿವರಿಗೂ ಸಂಬಂಧಪಟ್ಟದ್ದು. ಮಾನ್ಯ ಫೋರ್ಪಡೆಯವರಿಗೂ ಸಂಬಂಧಪಟ್ಟ ವಿಚಾರ. ಕಳೆದ ೧೨ನೇ ತಾರೀಖಿನಿಂದ ಸತ್ಯಾಗ್ರಹ ನಡೆಸುತ್ತಿದ್ದಾರೆ. ಅಲ್ಲಿ ಕೇವಲ ಬೇಟೆ ಆಡುವುದಕ್ಕೋಸ್ಕರ ಸಾವಿರಾರು ಎಕರೆ ಭೂಮಿಯನ್ನು ಇಟ್ಟುಕೊಂಡಿದ್ದಾರೆ. ಅದನ್ನು ಅಲ್ಲಿರತಕ್ಕಂತ ರೈತರಿಗೆ ಕೊಡುವುದು ಬೇಡ ಎಂದು ಹೇಳಿ ಬೇರೆ ರೀತಿಯಲ್ಲಿ ಕಬಳಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕಿಂತ ದಾರುಣ ವಿಚಾರ ಬೇರೆ ಯಾವುದು ಇಬೆ ? ಅಲ್ಲಿ ಇದ್ದಕ್ಕಿದ್ದ ಹಾಗೆ ಮಾಯಾ ಬಜಾರ್ ತರಹ ಒಂದು ಬೋರ್ಡ್ ಬಂದು ಬಿದ್ದಿದೆ. ಮ್ಯಾಂಗನೀಸ್ ಅದಿರು ತೆಗೆಯುವುದಕ್ಕೆ ಕೊಟ್ಟ ಜಮೀನಿನ ವಾಯಿದೆ ಮುಂಗಿಡರೂ ಮತ್ತೆ ಆ ಭೂಮಿಯನ್ನು ಅವರಿಗೇ ಕೊಡುವುನರಲ್ಲಿ ಇದ್ದಾತೆ. ಅಲ್ಲಿ ಸಭೆ ನಡೆಯದ ಹಾಗೆ ಮಾನ್ಯ ಫೋರ್ಪಡೆಯವರು ಏರ್ಪಾಡು ಮಾಡಿದ್ದಾರೆ. ಅಲ್ಲಿ ಇವತ್ತು ಸೊಡೂರಿನ ಸಂಸ್ಥಾನದ ಸರ್ಕಾರ ನಡೆಯುತ್ತಿದೆಯಲ್ಲದೆ ಹೊರತು ಭಾರತ ಸರ್ಕಾರದ ಆಡಳಿತ ನಡೆಯುತ್ತಾ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಅಲ್ಲಿ ನಂದಿಹಳ್ಳಿ ಪ್ರೊಜೆಕ್ಟ್ ಹತ್ತಿರ ಇರತಕ್ಕಂತಹ ೪೦೫ ಎಕರೆ ಮತ್ತು ಟೊಬ್ಯಾಕೋ ಕಂಪನಿಗೆ ಸೇರಿದ ಜಪಿನನ್ನು ವ್ಯವಸಾಯಕ್ಕೆ ರೈತರಿಗೆ ಕೊಡಬೇಕೆಂದು ಕೇಳಿದಾಗ, ಮಾನ್ಯ ಕಂದಾಯ ಸಚಿವರು ಅದು ವ್ಯವಸಾಯಕ್ಕೆ ಯೋಗ್ಯವಾಗಿದ್ದರೆ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಈವರೆಗೂ ಅದನ್ನು ಕಾರ್ಯಗತ ಮಾಡಿಲ್ಲ. ನಂದಿಹಳ್ಳಿಯ ಜಮೀನನ್ನು ಪೋಸ್ಟ್ ಗ್ರಾಜ್ಯುಯೇಶನ್ ಕೋರ್ಸು ಮಾಡುವುದಕ್ಕೆ ಬೇಕೆಂದು ಹೇಳುತ್ತಿದ್ದಾರೆ. ಅದಕ್ಕೆ ಬೇರೆ ಜಮೀನು ಇದ್ದರೂ ಇಡನ್ನೇ ಬೇಕೆಂದು ಹೇಳುತ್ತಿದ್ದಾರೆ. ಹಾಗೆಯೇ ಟೊಬ್ಯಾಕೋ ಕಂಪೆನಿಯ ಜಮೀನನ್ನು ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ಗೆ ಕೊಟ್ಟಿದ್ದಾರೆ. ಆದ್ದರಿಂದ ಇದರ ಬಗ್ಗೆ ಸರ್ಕಾರದ ಹೇಳಿಕೆಯನ್ನು ಈ ಸಭೆಯವರು ಅಪೇಕ್ಷೆ ಪಡುತ್ತಾರೆ.

ಶ್ರೀ ಡಿ ದೇವರಾಜ ಅರಸ್.—ಒಂದೊಂದು ವಿಚಾರ ಸತ್ಯಕ್ಕೆ ದೂರವಾದ ವಿ ಇರುತ್ತದೆ. ಅವರಿಗೆ ಕೆಲವು ಫ್ಯಾಕ್ಟ್ಸ್ ಗೊತ್ತಿರಾವುದಿಲ್ಲ ಎಂದು ನನಗನಿಸುತ್ತದೆ–ಅವರು ನಿಮ್ಮ ಪಕ್ಷದವರಾಗಿದ್ದರೂ They have chosen a wrong place to conduct this kind of Satyagraha. ಅದು ಅವರ ಪ್ರೈವೇಟ್ ಪ್ರೊಪರ್ಟಿಯೇ ಅಲ್ಲವೇ ಎಂಬುದನ್ನು ಎಗ್ಸಾಮಿನ್ ಮಾಡಿ ಹೇಳುವುದಕ್ಕಾಗುವುದಿಲ್ಲ. ಹಾಗೆ ತೆಗೆದುಕೊಂಡ ಜಮೀನನ್ನು ಫಾರೆಸ್ಟ್ ಇಲಾಖೆಯವರು ಇಟ್ಟುಕೊಳ್ಳಬೇಕೇ ಬೇಡವೇ ಎಂಬುದು ಎರಡನೆಯ ಪ್ರಶ್ನೆ.

ಶ್ರೀ ಕೋಣಂದೂರು ಲಿಂಗಪ್ಪ.—ನಾವು ೨೩ನೇ ಮಾರ್ಚ್ ೧೯೭೩ರಂದು ನಮ್ಮ ಪ್ರಶ್ನೆಯಲ್ಲಿ ಹೇಳಿ ಕೇಳಿಕೊಂಡಿದ್ದೇವೆ.

ಶ್ರೀ ಡಿ, ದೇವರಾಜ ಅರಸ್.—ಅದೇ ರೀತಿ ಒಂದು ಬಿಲ್ ಬಂದಿದೆ. ಅದನ್ನು ಇಂಟ್ರೊಡ್ಯೂಸ್ ಮಾಡಲಾಗಿದೆ. ಅದರ ಬಗ್ಗೆ ಈ ಮಾನ್ಯ ಸಭೆ ಏನು ತೀರ್ಮಾನ ತೆಗೆದುಕೊಳ್ಳಲ್ಲಿ ಅದರಂತೆ ಆಗುತ್ತದೆ. ಉಳಿದ ನಂದಿಹಳ್ಳಿ ಜಮೀನಿನ ಬಗ್ಗೆ ಬೇಕಾದರೆ ಮಾಹಿತಿ ತರಿಸಿ ಸ್ಟೇಟ್‌ಮೆಂಟ್ ಮಾಡುತ್ತೇವೆ.

Statement showing schedule of Additional Demands for 1973-74 (First instalment) presentation.

SUPPLEMENTARY DEMANDS FOR GRANTS.

SRI M Y. GHORPADE (Minister for Finance).—I beg to present a Statement showing the Schedule of Additional Demands for the year 1973-74 (from 1st April 1973 to 31st March 1974) first instalment, as required under article 205 (1) of the Constitution of India.

MADAM SPEAKER.—Statement showing the Schedule of Additional Demands for the year 1973-74 (from 1st April 1973 to 31st March 1974) first instalment, as required under article 205 (1) of the Constitution of India – presented.

MYSORE-PROHIBITION OF BEGGARY BILL, 1973. MOTION TO CONSIDER (DEBATE CONTINUED)

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು (ಶಾಂತಿ ನಗರ): —ಸನ್ಮಾನ್ಯ ಸಭಾಧ್ಯಕ್ಷರೆ, ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯವರು ತಂದಿರತಕ್ಕಂತಹ ೧೯೭೩ನೇ ಇಸವಿಯ ಮೈಸೂರು ರಾಜ್ಯದ ಭಿಕ್ಷಾಟನಾ ಅಪರಾಧಕ್ಕೆ ಸಂಬಂಧಪಟ್ಟ ಮಸೂದೆಯನ್ನು ಸ್ವಾಗತ ಮಾಡುತ್ತಾ ಈ ಸಂಧರ್ಭದಲ್ಲಿ ನಾಲ್ಕು ಮಾತುಗಳನ್ನು ಆಡಲಬ್ಚಿಸುತ್ತೇನೆ. ಈ ಬಿಲ್ಲಿನಲ್ಲಿ ತಂದಿರತಕ್ಕಂತಹ ಮೂಲ ಉದ್ದೇಶವೇನೋ ಬಹಳ ಜೆನ್ನಾಗಿದೆ. ನಾವು Statement of Objects and Reasons ನ್ನು ನೋಡುವಾಗ 'It is considered necessary to have a uniform law on the subject applicable to the whole of the State of Mysore.' ಎಂದು ಒತ್ತಿ ಹೇಳಿದ್ದಾರೆ.

ಎಂದು ಹೇಳುತ್ತಾರೆ. ಉದ್ದೇಶ ಬಹಳ ಜೆನ್ನಾಗಿದೆ. ಆದರೆ ನನಗೆ ಕೆಲವು ಸಂದೇಹಗಳೂ ಇವೆ. ಅಂದರೆ ಇದನ್ನು ಈಗಿನ ಪರಿಸ್ಥಿತಿಯಲ್ಲಿ ನಿಜವಾಗಿಯೂ ಕಾರ್ಯಗತ ಮಾಡುವುದಕ್ಕೆ ಆಗುತ್ತದೆಯೇ? ಇದಕ್ಕೆ ಮುಖ್ಯ ಕಾರಣ–ಇದರ ಬಗ್ಗೆ ಕೇಂದ್ರದವರು ಮತ್ತು ರಾಜ್ಯ ಸರ್ಕಾರಗಳು ಬೇಕಾದಷ್ಟು ಪ್ರಯತ್ನ ಮಾಡಿದ್ದಾರೆ. ಕೇಂದ್ರದಲ್ಲಿ ೧೯೫೯ನೇ ಇಸವಿಯಲ್ಲಿ ಇದರ ಬಗೆ ಒಂದು ಕಾನೂನನ್ನು